**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 199/2020**

ಪ್ರಾ.ಸಾ–6

| | | |
|---|---|---|
| ಹೆಸರು | : | ಮಹೇಂದ್ರ. ಎಂ., |
| ತಂದೆಯ ಹೆಸರು | : | ಮಹದೇವ. ಪಿ. |
| ವಯಸ್ಸು | : | 30 |
| ವೃತ್ತಿ | : | ಕಚೇರಿ ವ್ಯವಸ್ಥಾಪಕ, ಪುರಸಭೆ, ತಿ. ನರಸೀಪುರ |
| ವಾಸ | : | ತಿ. ನರಸೀಪುರ |

**ದಿನಾಂಕಃ 04.11.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ರವರಿಂದಃ**

2018 ರಿಂದ ಜುಲೈ 2022 ರವರೆಗೆ ತಿ.ನರಸೀಪುರದ ಪುರಸಭೆಯಲ್ಲಿ ಕಿರಿಯ ಆರೋಗ್ಯ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೆನು.

ಫ್ರಾಸಾ.2 ರವರು ಪುರಸಭೆಯಲ್ಲಿ ನೇರ ಪಾವತಿ ಪೌರಕಾರ್ಮಿಕರಾಗಿದ್ದರು. ಅವರನ್ನು 2019 ರ ಜನವರಿ ತಿಂಗಳಿನ ಒಂದು ದಿನದಂದು ತಿ. ನರಸೀಪುರ ಪಟ್ಟಣದ 5 ನೇ ವಾರ್ಡ್‌ನ ತ್ರಿವೇಣಿ ನಗರದ ರಾಜರಾಜೇಶ್ವರಿ ಮೆಡಿಕಲ್ ಅಂಗಡಿಯ ಬಳಿ ಚರಂಡಿಯನ್ನು ಸ್ವಚ್ಛಗೊಳಿಸಲು ನಿಯೋಜಿಸಿದ್ದೇವು.

ಸಿಸಿ ಸಂಖ್ಯೆ: 199/2020

ಆತ ಚರಂಡಿಯನ್ನು ಸ್ವಚ್ಛಗೊಳಿಸಿ ಕಸವನ್ನು ತೆಗೆದು ಹಾಕುತ್ತಿರುವಾಗ ಅದರ ಕಲುಷಿತ ನೀರು ಆರೋಪಿತನ ಮನೆಯ ಮುಂದೆ ಬಿದ್ದಿದ್ದರಿಂದ ಆಕೆಯ ತಾಯಿ ಪ್ರಾಸಾ.2 ರವರಿಗೆ ಆ ಬಗ್ಗೆ ವಿಚಾರಿಸಿ ಅವರ ಮನೆಯ ಮುಂದೆ ಆ ನೀರನ್ನು ಹಾಕದಂತೆ ಹೇಳಿರುತ್ತಾರೆ.

ನಂತರ ಪ್ರಾಸಾ.2 ರವರು ಆರೋಪಿತನ ತಾಯಿಗೆ ಆ ನೀರು ಸ್ವಲ್ಪ ಸಮಯದ ನಂತರ ಒಣಗಿ ಹೋಗುತ್ತದೆಂದು ಹೇಳಿದ್ದು, ಅದಕ್ಕೆ ಆರೋಪಿತ ಪ್ರಾಸಾ.2 ರವರನ್ನು ಉದ್ದೇಶಿಸಿ, ಅವರ ತಾಯಿಗೆ ಹಿಂತಿರುಗಿ ಮಾತಾಡುತ್ತಿಯಾ ಎಂದು ಏಕಾಏಕಿ ಪ್ರಾಸಾ.2 ರವರ ಮೇಲೆ ಹೊಡೆದು ಅವರ ಮೈಮೇಲೆ ಉಗುರಿನಿಂದ ಪರಚಿರಿತ್ತಾರೆ.

ನಂತರ ಪ್ರಾಸಾ.4 ರವರು ನನಗೆ ದೂರವಾಣಿ ಕರೆ ಮಾಡಿ ಘಟನೆಯ ಬಗ್ಗೆ ತಿಳಿಸಿರುತ್ತಾರೆ. ನಾನು ಪ್ರಾಸಾ.2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಪ್ರಾಸಾ.4 ರವರಿಗೆ ತಿಳಿಸಿದೆನು.

ನಂತರ ನಾನು ಆಸ್ಪತ್ರೆಗೆ ಹೋಗಿ ಪ್ರಾಸಾ.2 ರವರಿಗೆ ಚಿಕಿತ್ಸೆಯನ್ನು ಕೊಡಿಸಿದ ನಂತರ ಘಟನೆ ಕುರಿತು ಆತನನ್ನು ವಿಚಾರಿಸಿದಾಗ, ಆತ ಘಟನೆಯ ಕುರಿತು ತಿಳಿಸಿದನು.

ನಂತರ ಪೋಲೀಸ್ ಠಾಣೆಗೆ ಹೋಗಿ ನಾನು, ಪುರಸಭೆಯ ಮುಖ್ಯಾಧಿಕಾರಿ, ಆರೋಗ್ಯ ನಿರೀಕ್ಷಕರು ಮತ್ತು ಫ್ರಾಸಾ.2 ರವರು ಸೇರಿ ದೂರು ನೀಡಿರುತ್ತೇವೆ.

ಫ್ರಾಸಾ.2 ರವರನ್ನು ಕೆಲಸಕ್ಕೆ ನಿಯೋಜಿಸಿರುವ ಬಗ್ಗೆ ಮಾಡಿರುವ ಆದೇಶದ ಪ್ರತಿಯನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರಿತಿಸುರುತ್ತೇನೆ. ಆ ದಾಖಲೆಯು ಈಗಾಗಲೇ ನಿಪಿ.7 ಎಂದು ಗುರುತಿಸಲ್ಪಟ್ಟಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.7(ಬಿ) ಎಂದು ಗುರುತಿಸಲಾಯಿತು.

ನಾನು ಆರೋಪಿತನನ್ನು ಪೊಲೀಸ್ ಠಾಣೆಯಲ್ಲಿ ನೋಡಿದ್ದೇನು. ಆತನನ್ನು ಈಗ ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತೇನೆ.

**<u>ಪಾಟೀ ಸವಾಲು : ಶ್ರೀ ವಿ.ಕೆ. ವಕೀಲರಿಂದ : ಆರೋಪಿತರ ಪರವಾಗಿ:</u>**

ನಿಪಿ.7 ರಲ್ಲಿ ಶ್ರೀ ರಾಘವೇಂದ್ರ ಮೆಡಿಕಲ್ ಹತ್ತಿರ ಎಂದು ನಮೂದು ಇದೆ ಎಂದರೆ ಅದು ಬೆರಳಚ್ಚು ಮಾಡುವಾಗ ತಪ್ಪಾಗಿರುತ್ತದೆ. ನಾನು ಘಟನಾ ಸ್ಥಳವನ್ನು ನೋಡಿಲ್ಲ. ಘಟನೆಯ ಬಗ್ಗೆ ನನಗೆ ಫ್ರಾಸಾ.2 ಮತ್ತು 4 ರವರಿಂದ ತಿಳಿದಿದೆ, ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ. ಅವರ ಹೇಳಿಕೆಯ ಮೇರೆಗೆ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ, ನಾನು ಆಸ್ಪತ್ರೆಗೆ ಭೇಟಿ ನೀಡಿದಾಗ ಫ್ರಾಸಾ.2 ರವರಿಗೆ ಆಗಿದ್ದ ಗಾಯವನ್ನು ನೋಡಿದ್ದರಿಂದ ಸಾಕ್ಷ್ಯ ನುಡಿಯುತ್ತಿದ್ದೇನೆ.

ಫ್ರಾಸಾ.2 ರವರು ನಮ್ಮ ಕಚೇರಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಅವರ ಯೋಗಕ್ಷೇಮವನ್ನು ನಾನೇ ನೋಡಿಕೊಳ್ಳುತ್ತೇನೆ ಎಂದರೆ ಸರಿ.

ಫ್ರಾಸಾ.2 ರವರು ಆಯಾ ತಪ್ಪಿ ಬಿದ್ದು ಗಾಯ ಮಾಡಿಕೊಂಡು ಆಸ್ಪತ್ರೆಗೆ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಅವರಿಗೆ ಸರಾಯಿ ಕುಡಿಯುವ ಚಟವಿದೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಚರಂಡಿ ಸ್ವಚ್ಛಗೊಳಿಸುವ ಕಾರ್ಯವನ್ನು ಮಾಡುವವರು ಸರಾಯಿ ಕುಡಿದು ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಫ್ರಾಸಾ.2 ರವರು ನಮ್ಮ ಕಚೇರಿಯಲ್ಲಿ ಕೆಲಸ ಮಾಡುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಅದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ,**
**ತಿ.ನರಸೀಪುರ**